# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 480 (624) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ ನಾರಾಯಣ ಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16/09/2021 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಎರಡು ವರ್ಷಗಳಿಂದ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಮೊತ್ತವೆಷ್ಟು; ಹಾಗೂ ವಿನಿಯೋಗಿಸಿರುವ ಮೊತ್ತವೆಷ್ಟು; (ಯೋಜನಾವಾರು ಮಾಹಿತಿ ನೀಡುವುದು) | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಡಳಿಗಳು ಹಾಗೂ ಸದರಿ ಮಂಡಳಿಗಳು ವಿನಿಯೋಗಿಸಿರುವ ಮೊತ್ತದ ಕುರಿತಂತೆ ವಿವರಗಳನ್ನು ಈ ಕೆಳಗೆ ಒದಗಿಸಿದೆ.<br><br>**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br><br>ಈ ಮಂಡಳಿಯಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗಾಗಿ ಮತ್ತು ಅವರ ಅವಲಂಭಿತರಿಗಾಗಿ ಮಂಡಳಿಯ 2019-2020 ನೇ ಸಾಲಿನ ಆಯವ್ಯಯದಲ್ಲಿ ರೂ. 534.81 ಕೋಟಿ ಮೊತ್ತವನ್ನು ಮತ್ತು 2020-2021 ನೇ ಆಯವ್ಯಯದಲ್ಲಿ ಸಾಲಿನಲ್ಲಿ ರೂ.1487.50 ಕೋಟಿ ಮೊತ್ತವನ್ನು ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಿಗಾಗಿ ಮೀಸಲಿರಿಸಲಾಗಿದ್ದು, 2019-20 ನೇ ಸಾಲಿನಲ್ಲಿ ರೂ. 232.53 ಕೋಟಿ ಮೊತ್ತವನ್ನು 2020-21 ನೇ ಸಾಲಿನಲ್ಲಿ ರೂ. 223.35 ಕೋಟಿ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಯೋಜನೆವಾರು ವಿವರವನ್ನು **ಅನುಬಂಧ- 1** ರಲ್ಲಿ ಲಗತ್ತಿಸಿದೆ.<br><br>**2. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br><br>ಈ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಕಳೆದ ಎರಡು ವರ್ಷಗಳಿಂದ ಬಿಡುಗಡೆಯಾದ ಹಾಗೂ ವಿನಿಯೋಗಿಸಿದ ಮೊತ್ತದ ವಿವರ ಈ ಕೆಳಗಿನಂತಿದೆ: |
| ಆ) | ರಾಜ್ಯದ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಮೊತ್ತವೆಷ್ಟು; ಹಾಗೂ ವಿನಿಯೋಗಿಸಿರುವ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | |

1. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ

| ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ವಿನಿಯೋಗಿಸಿದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 2019–20 | 1034.50 | 891.94 |
| 2020–21 | 1801.00 | 3803.67 |

ಹೆಚ್ಚುವರಿ ವೆಚ್ಚವನ್ನು ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದ ಅನುದಾನದಿಂದ ಭರಿಸಲಾಗಿದೆ.

2. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:**

| ವರ್ಷ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ವಿನಿಯೋಗಿಸಿದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 2019–20 | 499.50 | 667.88 |
| 2020–21 | 1.00 | 1001.35 |

ಹೆಚ್ಚುವರಿ ವೆಚ್ಚವನ್ನು ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದ ಅನುದಾನದಿಂದ ಭರಿಸಲಾಗಿದೆ.

3. **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:**

ಈ ಮಂಡಳಿಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅಂಶದಾನದ ವಿವರಗಳು

| ವರ್ಷ | ಅಂಶದಾನ |
|---|---|
| 2019–20 | 718–00 ಲಕ್ಷಗಳು |
| 2020–21 | 600–00 ಲಕ್ಷಗಳು |

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಕಳೆದ ಎರಡು ವರ್ಷಗಳಲ್ಲಿ ಕಲ್ಯಾಣ ಯೋಜನೆಯಡಿ ವಿತರಿಸಿದ ಧನ ಸಹಾಯದ ವಿವರಗಳನ್ನು **ಅನುಬಂಧ–2** ರಲ್ಲಿ ಲಗತ್ತಿಸಿದೆ.

| | | |
|---|---|---|
| ಇ) | ರಾಜ್ಯದಲ್ಲಿ ಕೊರೋನಾ ಖಾಯಿಲೆಯಿಂದ ಕೆಲಸವಿಲ್ಲದೆ ನೊಂದಿರುವ ಅಸಂಘಟಿತ ಕಾರ್ಮಿಕರಿಗೆ ಸರ್ಕಾರದಿಂದ ಸಹಾಯದ ಧನ ನೀಡಲಾಗಿದೆಯೇ; ಹೌದಾದಲ್ಲಿ, ಈ ಯೋಜನೆಯಲ್ಲಿ ಅರ್ಜಿ ಸಲ್ಲಿಸಿರುವ ಸಂಖ್ಯೆ ಎಷ್ಟು; ಸಹಾಯ ಧನ ಪಡೆದ ಪಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | **1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:**<br>ಮಾನ್ಯ ಮುಖ್ಯಮಂತ್ರಿಗಳ ಘೋಷಣೆಯಂತೆ ಕೋವಿಡ್ 1ನೇ ಅಲೆಯಲ್ಲಿ 16,48,431 ಮಂಡಳಿಯ ಫಲಾನುಭವಿಗಳಿಗೆ ತಲಾ ರೂ.5,000/- ಗಳಂತೆ ಒಟ್ಟು ರೂ. 824.21 ಕೋಟಿ ಸಹಾಯ ಧನವನ್ನು ಮತ್ತು ಕೋವಿಡ್ 2ನೇ ಅಲೆಯಲ್ಲಿ ತಲಾ ರೂ.3,000/- ಗಳಂತೆ 18,20,703 ಫಲಾನುಭವಿಗಳಿಗೆ ರೂ. 546.21 ಕೋಟಿ ಮೊತ್ತದಷ್ಟು ಒಂದು ಬಾರಿ ಧನ ಸಹಾಯವನ್ನು ನೋಂದಾಯಿತ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಡಿಬಿಟಿ ಮುಖಾಂತರ ಜಮಾ ಮಾಡಲಾಗಿರುತ್ತದೆ. ಈ ಸಹಾಯ ಧನವನ್ನು ಬಿಡುಗಡೆ ಮಾಡಲು ಯಾವುದೇ ಅರ್ಜಿಯನ್ನು ಸ್ವೀಕರಿಸುವುದಿಲ್ಲ. ಜಿಲ್ಲಾವಾರು ವಿವರವನ್ನು **ಅನುಬಂಧ-03** ಮತ್ತು **ಅನುಬಂಧ-04** ರಲ್ಲಿ ಲಗತ್ತಿಸಿದೆ.<br><br>**2. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:**<br>ಈ ಮಂಡಳಿಯ ಮೂಲಕ ಕೋವಿಡ್-19ರಿಂದ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರಿಗೆವಿತರಿಸಲಾದ ವಿಶೇಷ ಪ್ಯಾಕೇಜ್‌ನ ವಿವರ ಈ ಕೆಳಗಿನಂತಿದೆ:<br><br>**ಅ) ಅಗಸರು ಹಾಗೂ ಕ್ಷೌರಿಕರಿಗೆ ರೂ.5000/-ಗಳ ಒಂದು ಬಾರಿಯ ನೆರವು:**<br>ಕೋವಿಡ್-19ರ 2020ನೇ ವರ್ಷದ ಮೊದಲನೆ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಗಸ ಮತ್ತು ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ಒಂದು ಬಾರಿಯ ರೂ.5,000/- ಗಳ ನೆರವು ಕೋರಿ 74,782 ಅಗಸರು ಮತ್ತು 66,820 ಕ್ಷೌರಿಕರು ಸೇರಿದಂತೆ ಒಟ್ಟು 1,41,602ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಅದರಲ್ಲಿ ಈವರೆಗೆ 1,19,462 ಕಾರ್ಮಿಕರಿಗೆ ತಲಾ ರೂ.5000/-ಗಳಂತೆ ಒಟ್ಟು ರೂ.59.82 ಕೋಟಿಗಳ ಪರಿಹಾರವನ್ನು ನೀಡಲಾಗಿದ್ದು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-5**ರಲ್ಲಿ ಒದಗಿಸಿದೆ.<br><br>**ಆ) 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ತಲಾ ರೂ.2000/- ಗಳಂತೆ ಒಂದು ಬಾರಿ ನೆರವು:**<br>ಕೋವಿಡ್-19ರವ 2021ನೇ ವರ್ಷದ ಎರಡನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ 11 ವರ್ಗಗಳಾದ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, |

| | | |
|---|---|---|
| | | ಗೃಹಕಾರ್ಮಿಕರು, ಟೈಲರ್‌ಗಳು, ಮೆಕ್ಯಾನಿಕ್, ಚಿಂದಿ ಆಯುವವರು, ಹಮಾಲರು, ಅಕ್ಕಸಾಲಿಗರು, ಕಮ್ಮಾರ, ಕುಂಬಾರರು ಹಾಗೂ ಭಟ್ಟಿಕಾರ್ಮಿಕರಿಗೆ ಒಂದು ಬಾರಿ ರೂ.2000/-ಗಳ ವಿಶೇಷ ಪ್ಯಾಕೇಜ್ ನೆರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುತ್ತಾರೆ.<br><br>ಈ ನೆರವಿನ ಮೊತ್ತವನ್ನು ಕೋರಿ ಒಟ್ಟು 18,23,445 ಅಸಂಘಟಿತ ಕಾರ್ಮಿಕರು ಅರ್ಜಿಯನ್ನು ಸಲ್ಲಿಸಿದ್ದು, ಅವುಗಳಲ್ಲಿ ಸುಮಾರು 14,05,778 ಕಾರ್ಮಿಕರು ಅರ್ಹರಿರುತ್ತಾರೆ. ಸದರಿ ಅರ್ಹ ಕಾರ್ಮಿಕರಲ್ಲಿ 2,14,731 ಅಸಂಘಟಿತ ಕಾರ್ಮಿಕರಿಗೆ ತಲಾ ರೂ.2000/-ಗಳಂತೆ ಒಟ್ಟು ರೂ.42.95 ಕೋಟಿಗಳ ನೆರವನ್ನು ಪಾವತಿಸಲಾಗಿದ್ದು, ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-6**ರಲ್ಲಿ ಒದಗಿಸಿದೆ. ಇನ್ನುಳಿದ ಕಾರ್ಮಿಕರಿಗೆ ನೆರವಿನ ಮೊತ್ತವನ್ನು ಪಾವತಿಸಲು ಅಗತ್ಯ ಕ್ರಮ ವಹಿಸಲಾಗಿದೆ. |
| ಈ) | ಸರ್ಕಾರ ಇದುವರೆಗೂ ಎಷ್ಟು ಅಸಂಘಟಿತ ಕಾರ್ಮಿಕರನ್ನು ಗುರುತಿಸಿದೆ; ಅವರಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು) | **1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**<br><br>ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಸಹ ಅಸಂಘಟಿತ ವಲಯಕ್ಕೆ ಸೇರಿರುತ್ತಾರೆ. ಇಂತಹ ಕಾರ್ಮಿಕರನ್ನು ನಿಯಮಾನುಸಾರ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಫಲಾನುಭವಿಗಳಾಗಿ ನೋಂದಾಯಿಸಲಾಗುತ್ತಿದ್ದು, ದಿನಾಂಕ: 31-07-2021 ರವರೆಗೆ 30.39 ಲಕ್ಷ ಕಾರ್ಮಿಕರು ಮಂಡಳಿಯಲ್ಲಿ ನೋಂದಾಯಿಸಲಾಗಿತ್ತದೆ. ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ 19 ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ರೂಪಿಸಿ ಜಾರಿಗೊಳಿಸಲಾಗುತ್ತಿದೆ. ವಿವರಗಳನ್ನು **ಅನುಬಂಧ-7** ರಲ್ಲಿ ನೀಡಿದೆ.<br><br>**2. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br>ಕರ್ನಾಟಕ ರಾಜ್ಯ ಸರ್ಕಾರವು ಅಸಂಘಟಿತ ವಲಯದ ಇತರೆ ವರ್ಗ (ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ 2008ರ ಕಲಂ 2(m) ಹಾಗೂ ಕಲಂ 2(l) ರ ವ್ಯಾಖ್ಯಾನಕ್ಕೆ ಒಳಪಡುವ ಅಸಂಘಟಿತ ವರ್ಗದ ಎಲ್ಲಾ ಕಾರ್ಮಿಕರು) ಸೇರಿದಂತೆ ಒಟ್ಟು 43 ಅಸಂಘಟಿತ ಕಾರ್ಮಿಕ ವರ್ಗಗಳನ್ನು ಗುರುತಿಸಿರುತ್ತದೆ. |

| | | |
|---|---|---|
| | | ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>**(1) <u>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-</u>**<br>ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br><br>**(ಅ) ಅಪಘಾತ ಪರಿಹಾರ ಸೌಲಭ್ಯ :**<br>ಯೋಜನೆಯಡಿ, ಅಪಘಾತದಿಂದಾದ ಮರಣ ಹೊಂದಿದ ಪ್ರಕರಣಗಳಲ್ಲಿ ರೂ. 5 ಲಕ್ಷ ಪರಿಹಾರ, ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಪ್ರಕರಣಗಳಲ್ಲಿ ರೂ.2 ಲಕ್ಷದ ಪರಿಹಾರ ಮತ್ತು ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ ರೂ.1 ಲಕ್ಷದವರೆಗೂ ಚಿಕಿತ್ಸಾ ವೆಚ್ಚದ ಮರುಪಾವತಿ ನೀಡಲಾಗುತ್ತಿದೆ.<br><br>**(ಆ) ಶೈಕ್ಷಣಿಕ ಧನ ಸಹಾಯ :**<br>ಅಪಘಾತದ ಕಾರಣ ನಿಧನರಾದ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿದ ಫಲಾನುಭವಿಗಳ ಇಬ್ಬರು ಮಕ್ಕಳಿಗೆ ಪದವಿಪೂರ್ವ ವ್ಯಾಸಂಗದವರೆಗೆ ವಾರ್ಷಿಕ ರೂ.10,000/-ಗಳ ಶೈಕ್ಷಣಿಕ ಸಹಾಯಧನ ನೀಡಲಾಗುತ್ತಿದೆ.<br><br>**(ಇ) <u>ಅಪಘಾತ ಜೀವ ರಕ್ಷಕ ಕಾರ್ಯಕ್ರಮ:</u>**<br>ಈ ಕಾರ್ಯಕ್ರಮದಡಿ ಅಪಘಾತಕ್ಕೊಳಗಾದ ಗಾಯಾಳುಗಳನ್ನು ರಕ್ಷಿಸುವ ದೃಷ್ಟಿಯಿಂದ ಅಪಘಾತ ಜೀವರಕ್ಷಕರನ್ನಾಗಿಸುವ ಉದ್ದೇಶದಿಂದ ಚಾಲಕರಿಗೆ ಪ್ರಥಮ ಚಿಕಿತ್ಸಾ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಪಡೆದ ಚಾಲಕರಿಗೆ ಪ್ರಥಮ ಚಿಕಿತ್ಸಾ ಕಿಟ್ ಹಾಗೂ ಪ್ರಮಾಣ ಪತ್ರ ನೀಡಲಾಗುತ್ತಿದೆ.<br><br>**(ಈ) ಶ್ರಮ ಸಮ್ಮಾನ ಪ್ರಶಸ್ತಿ :**<br>ಪ್ರತಿ ವರ್ಷ ಸರ್ಕಾರದ ಆದೇಶದಂತೆ, ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, ಉತ್ತಮ ಹಾಗೂ ಸುರಕ್ಷತಾ ಚಾಲನೆ ಮಾಡಿದ ತ್ರಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಚಾಲಕರಿಗೆ ಪ್ರತಿ |

ಜಿಲ್ಲೆಗೆ ಪ್ರತ್ಯೇಕವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು ರಾಜ್ಯಾದ್ಯಂತ 660 ಚಾಲಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.

(2) <u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:-</u>

(ಅ) "ಸ್ಮಾರ್ಟ್ ಕಾರ್ಡ್":

ಯೋಜನೆಯಡಿ ಅಸಂಘಟಿತ ವಲಯದ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ"ರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುತ್ತಿದೆ.

(ಆ) ಶ್ರಮ ಸಮ್ಮಾನ ಪ್ರಶಸ್ತಿ:

ಪ್ರತಿ ವರ್ಷ, ಸರ್ಕಾರದ ಆದೇಶದಂತೆ, ಮಾರ್ಚ್ 01 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಮಿಕ ಸಮ್ಮಾನ ದಿನಾಚರಣೆ ಆಚರಿಸಿ, 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸಥವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವಲಯಗಳಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಮಿಕರನ್ನು ಗುರುತಿಸಿ, ಪ್ರತಿಯೊಂದು ಜಿಲ್ಲೆಗೆ ಪ್ರತಿಯೊಂದು ವಲಯಕ್ಕೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಪ್ರಶಸ್ತಿ ಮತ್ತು 8 ವಿಶೇಷ ಪುರಸ್ಕಾರ ಪ್ರಶಸ್ತಿಗಳು ಸೇರಿ ಒಟ್ಟು 3630 ಕಾರ್ಮಿಕರಿಗೆ "ಶ್ರಮ ಸಮ್ಮಾನ ಪ್ರಶಸ್ತಿ" ನೀಡಿ ಗೌರವಿಸಲಾಗುತ್ತಿದೆ.

1. **(ಅ)ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆ (ಪಿಎಂ-ಎಸ್‌ವೈಎಂ):-**

ಕೇಂದ್ರ ಸರ್ಕಾರದ ಈ ಯೋಜನೆಯಡಿ 18 – 40 ವರ್ಷ ವಯೋಮಾನದ ಅಸಂಘಟಿತ ಕಾರ್ಮಿಕರು ನೊಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3,000/- ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಅವರ ವಯಸ್ಸಿನ ಆಧಾರದ ಮೇಲೆ ಮಾಸಿಕ ತಲಾ ರೂ. 55/- ರಿಂದ ರೂ. 200/- ರವರೆಗೆ ಕೇಂದ್ರ ಸರ್ಕಾರವು ಸಮಾನಾಂತರ ವಂತಿಕೆಯನ್ನು ಪಾವತಿಸುತ್ತದೆ.

| | | |
|---|---|---|
| | | **(ಆ) ನ್ಯೂ ಪೆನ್ಷನ್ ಸ್ಕೀಮ್ ಫಾರ್ ಟ್ರೇಡರ್ಸ್ ಅಂಡ್ ಸೆಲ್ಫ್ ಎಂಪ್ಲಾಯ್ಡ್ ಪರ್ಸನ್ಸ್ (New Pension Scheme For Traders And Self Employed Persons)**<br>ಕೇಂದ್ರ ಸರ್ಕಾರದ ಈ ಯೋಜನೆಯಡಿ 18 ರಿಂದ 40 ವರ್ಷ ವಯೋಮಾನದ ಅಂಗಡಿ ಮಾಲೀಕರು, ಚಿಲ್ಲರೆ ವ್ಯಾಪಾರಿಗಳು, ಅಕ್ಕಿ ಗಿರಣಿ ಮಾಲೀಕರು, ಎಣ್ಣೆ ಗಿರಣಿ ಮಾಲೀಕರು, ವರ್ಕ್‌ಶಾಪ್ ಮಾಲೀಕರು, ಕಮಿಷನ್ ಏಜೆಂಟ್ಸ್, ರಿಯಲ್ ಎಸ್ಟೇಟ್‌ನ ಬ್ರೋಕರ್ಸ್, ಸಣ್ಣ ಹೋಟೆಲ್ ಹಾಗೂ ರೆಸ್ಟೋರೆಂಟ್‌ನ ಮಾಲೀಕರು ಹಾಗೂ ಅಂತಹ ಇತರೆ ಸಣ್ಣ ವ್ಯಾಪಾರಗಳಲ್ಲಿ ತೊಡಗಿಸಿಕೊಂಡ ವ್ಯಾಪಾರಿಗಳು/ಲಘು ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳು ನೊಂದಾಯಿಸಿಕೊಂಡು 60 ವರ್ಷ ಪೂರೈಸಿದ ನಂತರ ಮಾಸಿಕ ನಿಶ್ಚಿತ ರೂ.3,000/- ಗಳ ಪಿಂಚಣಿ ಸೌಲಭ್ಯ ಪಡೆಯಬಹುದಾಗಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಅವರ ವಯಸ್ಸಿನ ಆಧಾರದ ಮೇಲೆ ಮಾಸಿಕ ತಲಾ ರೂ. 55/- ರಿಂದ ರೂ. 200/- ರವರೆಗೆ ಕೇಂದ್ರ ಸರ್ಕಾರವು ಸಮಾನಾಂತರ ವಂತಿಕೆಯನ್ನು ಪಾವತಿಸುತ್ತದೆ. |
| ಉ) | ರಾಜ್ಯದಲ್ಲಿ ಕೊರೋನಾ ಮಹಾಮಾರಿಗೆ ಬಲಿಯಾದ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; ಅವರ ಕುಟುಂಬಗಳಿಗೆ ಸರ್ಕಾರ ಯಾವ ರೀತಿ ಸಹಾಯ ಮಾಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೊರೋನ ಮಹಾಮಾರಿಗೆ ಬಲಿಯಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಖ್ಯೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಲಭ್ಯವಿರುವುದಲ್ಲ. ಕೋವಿಡ್-19 ನಿಂದಾಗಿ ನೋಂದಾಯಿತ ಫಲಾನುಭವಿಯು ಮರಣ ಹೊಂದಿದಲ್ಲಿ ಅವರ ಅವಲಂಬಿತರಿಗೆ ರೂ.2.00 ಲಕ್ಷ ಪರಿಹಾರಧನವನ್ನು ಮಂಡಳಿವತಿಯಿಂದ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ.<br>ರಾಜ್ಯದಲ್ಲಿ ಕೊರೋನಾ ಮಹಾಮಾರಿಗೆ ಬಲಿಯಾದ ಅಸಂಘಟಿತ ಕಾರ್ಮಿಕರ ಮಾಹಿತಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಲಭ್ಯವಿರುವುದಿಲ್ಲ.ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ಈ ಕುರಿತು ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. |

**ಕಾಇ 374 ಎಲ್‌ಇಟಿ 2021**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

<u>ಅನುಬಂಧ-01</u>

## ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

| 2019-20 ಮತ್ತು 2020-21 ರವರೆಗೆ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಿಗೆ ಮೀಸಲಿರಿಸಿದ ಮೊತ್ತ ಮತ್ತು ವಿತರಿಸಲಾದ ಸಹಾಯ ಧನದ ಮೊತ್ತದ ವಿವರ | | | | | | |
|---|---|---|---|---|---|---|
| ಸೌಲಭ್ಯಗಳ ವಿವರ | 2019-20 | | | 2020-21 | | |
| | ಮಂಡಳಿಯ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಮಾಡಿದ ಮೊತ್ತ | ಮಂಡಳಿಯ ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ | ಬಿಡುಗಡೆ ಮಾಡಿದ ಮೊತ್ತ |
| ಶೈಕ್ಷಣಿಕ ಧನಸಹಾಯ | 126,00,00,000 | 1,25,403 | 72,47,88,917 | 179,50,00,00,000 | 1,15,538 | 86,93,66,430 |
| ಮದುವೆ ಧನಸಹಾಯ | 100,00,00,000 | 10,966 | 45,35,96,000 | 200,00,00,000 | 16,183 | 41,97,30,000 |
| ಅಂತ್ಯ ಸಂಸ್ಕಾರಕ್ಕೆ ವೆಚ್ಚ | 22,51,00,000 | 3,674 | 19,86,41,000 | 15,00,00,000 | 3,342 | 18,07,06,000 |
| ಪ್ರಮುಖ ವೈದ್ಯಕೀಯ | 5,50,00,000 | 778 | 2,26,68,307 | 10,00,00,000 | 1,235 | 4,67,00,314 |
| ಅಪಘಾತ ಪರಿಹಾರ | 5,00,00,000 | 116 | 3,19,57,000 | 10,00,00,000 | 129 | 2,20,59,000 |
| ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಮರಣ ಪರಿಹಾರ | 0 | 0 | 0 | 0 | 14 | 29,00,000 |
| ಹೆರಿಗೆ ಧನಸಹಾಯ | 7,80,00,000 | 572 | 1,19,30,174 | 7,50,00,000 | 81 | 16,50,000 |
| ವೈದ್ಯಕೀಯ ವೆಚ್ಚ | 5,50,00,000 | 95 | 20,19,557 | 10,00,00,000 | 212 | 25,30,550 |
| ಪಿಂಚಣಿ ಸೌಲಭ್ಯ | 7,00,00,000 | 627 | 2,30,26,000 | 20,00,00,000 | 643 | 2,86,24,000 |
| ದುರ್ಬಲತೆ ಪಿಂಚಣಿ | 3,00,00,000 | 16 | 29,99,000 | 2,00,00,000 | 5 | 12,90,000 |
| ಕುಟುಂಬ ಪಿಂಚಣಿ | 50,00,000 | | | 3,00,00,000 | 5 | 24,000 |
| ಶ್ರಮ ಸಾಮರ್ಥ್ಯ | 96,00,00,000 | 623 | 9,01,70,239 | 115,00,00,000 | 40,385 | 5,71,47,550 |
| ಬಿಎಂಟಿಸಿ ಬಸ್ ಪಾಸ್ | 50,00,00,000 | 2,996 | 5,94,300 | 50,00,00,000 | 50,969 | 59,49,39,450 |
| ವಸತಿ ಸೌಲಭ್ಯ | 100,00,00,000 | 5,129 | 76,00,00,000 | 500,00,00,000 | 0 | 0 |
| ಶಿಶು ಪಾಲನಾ ಕೇಂದ್ರಗಳ ಸ್ಥಾಪನೆ | 1,00,00,000 | 501 | 30,00,000 | 30,00,00,000 | 218 | 57,63,296 |
| ತಾಯಿ ಮಗು ಸಹಾಯ ಹಸ್ತ | 5,00,00,000 | | | 7,50,00,00,000 | 27 | 1,62,000 |
| ಒಟ್ಟು | 534,810,00,00 | 1,51,496 | 2,32,53,90,494 | 1487,50,00,000 | 2,28,986 | 2,23,35,92,590 |

<u>ಅನುಬಂಧ-02</u>

<u>ಕಾರ್ಮಿಕ ಕಲ್ಯಾಣ ಮಂಡಳಿ ನೀಡಿರುವ ವಿವಿಧ ಸೌಲಭ್ಯಗಳ ವಿವರ ಈ ಕೆಳಕಂಡಂತಿರುತ್ತದೆ.</u>

| | ವರ್ಷ | 2019-20 | | 2020-21 | |
|---|---|---|---|---|---|
| | ಯೋಜನೆಗಳ ವಿವರ | ಫಲಾನುಭವಿ ಸಂಖ್ಯೆ | ಮೊತ್ತರೂ. | ಫಲಾನುಭವಿ ಸಂಖ್ಯೆ | ಮೊತ್ತರೂ. |
| 1 | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | 26,257 | 10,51,98,000 | 13,729 | 6,01,48,000 |
| 2 | ವೈದ್ಯಕೀಯ ನೆರವು. | 5 | 45,252 | 7 | 70,000 |
| 3 | ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ. | 295 | 14,75,000 | 387 | 19,35,000 |
| 4 | ಕಾರ್ಮಿಕರ ಅಪಘಾತ ಧನ ಸಹಾಯ | – | – | 1 | 3,000 |
| 5 | ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀದಿಸಲು ಧನ ಸಹಾಯ | – | – | – | – |
| 6 | ವೈದ್ಯಕೀಯ ತಪಾಸಣಾ ಶಿಬಿರ | 400 (2 ಸಂಘಟನೆ) | 60,000 | 401 (2 ಸಂಘಟನೆ) | 60,000 |
| 7 | ವಾರ್ಷಿಕ ಕ್ರೀಡಾ ಚಟುವಟಿಕೆ | 600 (2 ಸಂಘಟನೆ) | 1,00,000 | – | – |
| 8 | ಮೇ॥ ಎಸ್.ಬಿ.ಪೈರಾಲಿಸಾಸ್ ಇಂಡಸ್ಟ್ರೀಸ್, ಕಡಚೂರು, ಯಾದಗಿರಿ ಜಿಲ್ಲೆ ಇಲ್ಲಿ ಅಪಘಾತಕ್ಕಿಡಾಗಿ ಮೃತಪಟ್ಟ ಇಬ್ಬರು ಕಾರ್ಮಿಕರಿಗೆ ತಲಾ 3.00 ಲಕ್ಷ ಪರಿಹಾರ ಧನ ಸಹಾಯ | – | – | 2 | 6,00,000 |
| | ಒಟ್ಟು | 27,557 | 10,68,78,252 | 14,527 | 6,28,16,000 |

ಅನುಬಂಧ-03

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

## District wise Details of Registered BOC Workers of the KBOCWWB who have been Credited with Rs.5000 during First wave of COVID-19

| Sl No. | District | Payment Done from Board Through DBT Aadhaar | Payment Done From Board Through NEFT | Payment done From Labour Officer's |
|---|---|---|---|---|
| 1 | Bagalkote | 15579 | 3393 | 10555 |
| 2 | Belgaum | 41674 | 11281 | 17026 |
| 3 | Bellary | 45372 | 4036 | 33433 |
| 4 | Bengaluru | 36357 | 5378 | 42032 |
| 5 | Bidar | 43651 | 5117 | 22846 |
| 6 | Bijapur | 17613 | 3773 | 24239 |
| 7 | Chamarajnagar | 40290 | 1117 | 13252 |
| 8 | Chikkaballapur | 15980 | 1031 | 6735 |
| 9 | Chikkamagalur | 19550 | 9040 | 6139 |
| 10 | Chitradurga | 60049 | 3927 | 14556 |
| 11 | Davanagere | 58869 | 3194 | 22245 |
| 12 | Gadag | 11999 | 5102 | 6748 |
| 13 | Hassan | 54320 | 3401 | 15182 |
| 14 | Haveri | 13247 | 11138 | 19991 |
| 15 | Hubli | 48299 | 7813 | 20973 |
| 16 | Gulbarga | 40707 | 6335 | 37875 |
| 17 | Karwar | 47485 | 13792 | 17664 |
| 18 | Kolar | 44575 | 726 | 21288 |
| 19 | Koppal | 65794 | 5757 | 5348 |
| 20 | Madikeri | 951 | 468 | 1443 |
| 21 | Mandya | 24824 | 1643 | 14622 |
| 22 | Mangalore | 35657 | 7593 | 13132 |
| 23 | Mysore | 34030 | 2852 | 28120 |
| 24 | Raichur | 38789 | 2080 | 13279 |
| 25 | Ramnagar | 9638 | 1059 | 18393 |
| 26 | Shimoga | 92815 | 7055 | 13569 |
| 27 | Tumkur | 23338 | 2317 | 15527 |
| 28 | Udupi | 17430 | 7409 | 7759 |
| 29 | Yadgiri | 15774 | 4269 | 7708 |
| | **Total** | **10,14,656** | **1,42,096** | **4,91,679** |
| | **Grand Total** | **16,48,431** | | |
| | **Total Amount Disbursed** | **824,21,55,000** | | |

ಅನುಬಂಧ-04

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

**District wise Registered Construction workers who have been credited with Rs.3000/-during second wave of COVID-19**

| DISTRICT NAME | No. of Beneficiary who have been credited Rs.3000/- | Total Amount Disbursed |
|---|---|---|
| BAGALKOT | 52936 | 158808000 |
| BENGALURU | 146087 | 438261000 |
| BELGAUM | 97921 | 293763000 |
| BELLARY | 56473 | 169419000 |
| BIDAR | 132521 | 397563000 |
| BIJAPUR | 56954 | 170862000 |
| CHAMARAJA NAGAR | 28468 | 85404000 |
| CHIKBALLAPUR | 21557 | 64671000 |
| CHIKMAGALUR | 49502 | 148506000 |
| CHITRADURGA | 61299 | 183897000 |
| DAKSHINA KANNADA | 44108 | 132324000 |
| DAVANAGERE | 78623 | 235869000 |
| DHARWAD | 68652 | 205956000 |
| GADAG | 36707 | 110121000 |
| HASSAN | 64794 | 194382000 |
| HAVERI | 102258 | 306774000 |
| GULBARGA | 149826 | 449478000 |
| KODAGU | 3372 | 10116000 |
| KOLAR | 49204 | 147612000 |
| KOPPAL | 63682 | 191046000 |
| MANDYA | 17986 | 53958000 |
| MYSORE | 59011 | 177033000 |
| RAICHUR | 34834 | 104502000 |
| RAMANAGARA | 25709 | 77127000 |
| SHIMOGA | 79325 | 237975000 |
| TUMKUR | 46150 | 138450000 |
| UDUPI | 29882 | 89646000 |
| UTTARA KANNADA | 55190 | 165570000 |
| YADGIRI | 52570 | 157710000 |
| Yet to filter with the District | 55102 | 165306000 |
| **Total** | **18,20,703** | **546,21,09,000** |

## ಅನುಬಂಧ-5

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಕೋವಿಡ್-19ರ ಮೊದಲನೇ ಅಲೆಯಲ್ಲಿ ಘೋಷಿಸಲಾದ ವಿಶೇಷ ಪ್ಯಾಕೇಜ್ ಅಡಿ ರೂ. 5,000/-ಗಳ ನೆರವು ಕೋರಿ ಅರ್ಜಿ ಸಲ್ಲಿಸಿದ ಹಾಗೂ ಪರಿಹಾರ ಪಡೆದ ಫಲಾನುಭವಿಗಳ ವಿವರ**

| ಕ್ರ.ಸಂ. | ಜಿಲ್ಲೆಯ ಹೆಸರು | ಅರ್ಜಿ ಸಲ್ಲಿಸಿದ ಕಾರ್ಮಿಕರ ಸಂಖ್ಯೆ | ಪರಿಹಾರ ಪಡೆದ ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 3489 | 2897 |
| 2 | ಬಳ್ಳಾರಿ | 10570 | 8986 |
| 3 | ಬೆಂಗಳೂರು ನಗರ | 12078 | 10206 |
| 4 | ಬೆಂಗಳೂರು ಗ್ರಾಮಾಂತರ | 2490 | 2225 |
| 5 | ಬೆಳಗಾವಿ | 8455 | 7039 |
| 6 | ಬೀದರ್ | 3881 | 2751 |
| 7 | ಚಾಮರಾಜನಗರ | 4007 | 3510 |
| 8 | ಚಿಕ್ಕಬಳ್ಳಾಪುರ | 5273 | 4394 |
| 9 | ಚಿಕ್ಕಮಗಳೂರು | 1492 | 1294 |
| 10 | ಚಿತ್ರದುರ್ಗ | 5445 | 4615 |
| 11 | ದಕ್ಷಿಣಕನ್ನಡ | 1337 | 1179 |
| 12 | ದಾವಣಗೆರೆ | 4221 | 3638 |
| 13 | ಧಾರವಾಡ | 4448 | 3814 |
| 14 | ಗದಗ | 3239 | 2718 |
| 15 | ಗುಲ್ಬರ್ಗಾ | 6011 | 4978 |
| 16 | ಹಾಸನ | 3702 | 3231 |
| 17 | ಹಾವೇರಿ | 4581 | 3764 |
| 18 | ಕೋಲಾರ | 4958 | 4056 |
| 19 | ಕೊಪ್ಪಳ | 4745 | 3954 |
| 20 | ಮಂಡ್ಯ | 6400 | 5665 |
| 21 | ಮೈಸೂರು | 8441 | 7400 |
| 22 | ರಾಮನಗರ | 2418 | 2065 |
| 23 | ರಾಯಚೂರು | 8349 | 7079 |
| 24 | ಶಿವಮೊಗ್ಗ | 2453 | 2053 |
| 25 | ತುಮಕೂರು | 7178 | 6215 |
| 26 | ಉಡುಪಿ | 1416 | 1211 |
| 27 | ಉತ್ತರಕನ್ನಡ | 1671 | 1450 |
| 28 | ಕೊಡಗು | 633 | 557 |
| 29 | ವಿಜಯಪುರ | 4676 | 3756 |
| 30 | ಯಾದಗಿರಿ | 3545 | 2942 |
| ಒಟ್ಟು | | **141602** | **119642** |

## ಅನುಬಂಧ-6

**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಕೋವಿಡ್-19ರ ಎರಡನೆಯ ಅಲೆಯಲ್ಲಿ ಘೋಷಿಸಲಾದ ವಿಶೇಷ ಪ್ಯಾಕೇಜ್ ಅಡಿ ರೂ. 2,000/-ಗಳ ನೆರವು ಕೋರಿ ಅರ್ಜಿ ಸಲ್ಲಿಸಿದ ಹಾಗೂ ಪರಿಹಾರ ಪಡೆದ ಫಲಾನುಭವಿಗಳ ವಿವರ**

| ಕ್ರ.ಸಂ. | ಜಿಲ್ಲೆಯ ಹೆಸರು | ಅರ್ಜಿ ಸಲ್ಲಿಸಿದ ಕಾರ್ಮಿಕರ ಸಂಖ್ಯೆ | ಪರಿಹಾರ ಪಡೆದ ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 38124 | 6021 |
| 2 | ಬಳ್ಳಾರಿ | 73260 | 12362 |
| 3 | ಬೆಂಗಳೂರು ನಗರ | 147631 | 21760 |
| 4 | ಬೆಂಗಳೂರು ಗ್ರಾಮಾಂತರ | 17525 | 2620 |
| 5 | ಬೆಳಗಾವಿ | 151032 | 13781 |
| 6 | ಬೀದರ್ | 56827 | 3791 |
| 7 | ಚಾಮರಾಜನಗರ | 30439 | 5414 |
| 8 | ಚಿಕ್ಕಬಳ್ಳಾಪುರ | 32634 | 5466 |
| 9 | ಚಿಕ್ಕಮಗಳೂರು | 20418 | 3157 |
| 10 | ಚಿತ್ರದುರ್ಗ | 37392 | 7703 |
| 11 | ದಕ್ಷಿಣಕನ್ನಡ | 31663 | 5634 |
| 12 | ದಾವಣಗೆರೆ | 38446 | 7853 |
| 13 | ಧಾರವಾಡ | 58486 | 5398 |
| 14 | ಗದಗ | 30634 | 4485 |
| 15 | ಗುಲ್ಬರ್ಗಾ | 123276 | 6150 |
| 16 | ಹಾಸನ | 18587 | 5432 |
| 17 | ಹಾವೇರಿ | 44151 | 5157 |
| 18 | ಕೋಲಾರ | 38967 | 4878 |
| 19 | ಕೊಪ್ಪಳ | 46550 | 6372 |
| 20 | ಮಂಡ್ಯ | 45058 | 9153 |
| 21 | ಮೈಸೂರು | 102344 | 12724 |
| 22 | ರಾಮನಗರ | 17213 | 3010 |
| 23 | ರಾಯಚೂರು | 48597 | 9838 |
| 24 | ಶಿವಮೊಗ್ಗ | 30324 | 5108 |
| 25 | ತುಮಕೂರು | 54899 | 10697 |
| 26 | ಉಡುಪಿ | 12313 | 3532 |
| 27 | ಉತ್ತರಕನ್ನಡ | 40202 | 16165 |
| 28 | ಕೊಡಗು | 3792 | 2544 |
| 29 | ವಿಜಯಪುರ | 34103 | 4621 |
| 30 | ಯಾದಗಿರಿ | 28056 | 3905 |
| ಒಟ್ಟು | | **14,52,943** | **2,14,731** |

## ಅನುಬಂಧ-07

### ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಫಲಾನುಭವಿಗಳಿಗೆ ಸಿಗುವ ಸೌಲಭ್ಯಗಳು

1. **ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆಮಾಸಿಕ ರೂ.2,000/-
2. **ಕುಟುಂಬ ಪಿಂಚಣಿ ಸೌಲಭ್ಯ:** ಮೃತ ಪಿಂಚಣಿದಾರರ ಪತಿ / ಪತ್ನಿ ಮಾಸಿಕ ರೂ.1000/-
3. **ದುರ್ಬಲತೆ ಪಿಂಚಣಿ:** ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ/ಭಾಗಶಃಅಂಗವಿಕಲತೆ ಹೊಂದಿದ್ದರೆ ಮಾಸಿಕ **ರೂ.2,000/-** ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ **ರೂ.2,00,000/-** ದವರೆಗೆಅನುಗ್ರಹ ರಾಶಿ ಸಹಾಯಧನ.
4. **ಕನ್ನಡಕ, ಶ್ರವಣಯಂತ್ರ, ಕೃತಕ ಕೈಕಾಲು ಮತ್ತು ಗಾಲಿ ಕುರ್ಚಿ ಮರುಪಾವತಿ ಸೌಲಭ್ಯ**( ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
5. **ಟ್ರೈನಿಂಗ್-ಕಮ್-ಟೂಲ್‌ಕಿಟ್‌ಸೌಲಭ್ಯ (ಶ್ರಮ ಸಾಮರ್ಥ್ಯ) : ರೂ.30,000/- ವರೆಗೆ**
6. **ಶ್ರಮ ಸಂಸಾರ ಸಾಮರ್ಥ್ಯತರಬೇತಿ ಸೌಲಭ್ಯ:** ನೋಂದಾಯಿತ ಫಲಾನುಭವಿಯಅವಲಂಬಿತರಿಗೆ( ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)
7. **ವಸತಿ ಸೌಲಭ್ಯ** (ಕಾರ್ಮಿಕ ಗೃಹ ಭಾಗ್ಯ): ರೂ.2,00,000/- ದವರೆಗೆ ಮುಂಗಡ ಸೌಲಭ್ಯ
8. **ಹೆರಿಗೆ ಸೌಲಭ್ಯ (ತಾಯಿ ಲಕ್ಷ್ಮೀ ಬಾಂಡ್):** ಮಹಿಳಾ ಫಲಾನುಭವಿಯ ಮೊದಲ ಎರಡು ಮಕ್ಕಳಿಗೆ ಹೆಣ್ಣು ಮಗುವಿನ ಜನನಕ್ಕೆರೂ. 30,000/- ಮತ್ತುಗಂಡು ಮಗುವಿನ ಜನನಕ್ಕೆರೂ.20,000/-
9. **ಶಿಶು ಪಾಲನಾ ಸೌಲಭ್ಯ:**
10. **ಅಂತ್ಯಕ್ರಿಯೆ ವೆಚ್ಚ :** ರೂ.4,000/- ಹಾಗೂ ಅನುಗ್ರಹ ರಾಶಿ **ರೂ.50,000/-**ಸಹಾಯಧನ
11. **ಶೈಕ್ಷಣಿಕ ಸಹಾಯಧನ** (ಕಲಿಕೆ ಭಾಗ್ಯ): **ಫಲಾನುಭವಿಯಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ:**

| ಕ್ರ.ಸಂ | ತರಗತಿ (ಉತ್ತೀರ್ಣಕ್ಕೆ) | |
|---|---|---|
| 1 | ಕೆಜಿ/ ಪೂರ್ವ ಶಾಲೆ /ನರ್ಸರಿ(ವರ್ಷ 3 ರಿಂದ 5) | 5,000 |
| 2 | 1 ರಿಂದ 4ನೇ ತರಗತಿ | 5,000 |
| 3 | 5 ರಿಂದ 8ನೇ ತರಗತಿ | 8,000 |
| 4 | 9 ಹಾಗೂ 10ನೇ ತರಗತಿ | 12,000 |
| | **ಪದವಿ ಪೂರ್ವ** | |
| 5 | ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿ.ಯು.ಸಿ | 15,000 |
| 6 | ಪಾಲಿಟೆಕ್ನಿಕ್ / ಡಿಪ್ಲಮಾ/ ಐಟಿಐ | 20,000 |
| 7 | ಬಿಎಸ್‌ಸಿ ನರ್ಸಿಂಗ್/ ಜಿಎನ್‌ಎಮ್/ ಎಎನ್‌ಎಮ್/ ಪಾರಮೆಡಿಕಲ್ ಕೋರ್ಸ್ | 40,000 |
| 8 | ಡಿ.ಎಡ್ | 25,000 |
| | ಬಿ.ಎಡ್ | 35,000 |
| 9 | ಪದವಿ ಪ್ರತಿ ವರ್ಷಕ್ಕೆ (ಯಾವುದೇ ಪದವಿ) | 25,000 |
| 10 | ಎಲ್‌ಎಲ್‌ಬಿ / ಎಲ್‌ಎಲ್‌ಎಮ್ | 30,000 |
| 11 | ಸ್ನಾತಕೋತ್ತರ ಪದವಿ ಸೇರ್ಪಡೆಗೆ | 35,000 ಗರಿಷ್ಠ 2 ವರ್ಷಅವಧಿಗೆ ಒಳಪಟ್ಟು |

| | | |
|---|---|---|
| ತಾಂತ್ರೀಕ/ ವೈದ್ಯಕೀಯಎಸ್ಇಇಟಿಅಥವಾ ಕೆಸಿಇಟಿ | | |
| 12 | ಬಿಇ / ಬಿ.ಟೆಕ್ ಅಥವಾ ಸಂಬಂಧಪಟ್ಟ ಯೂಜಿ ಕೋರ್ಸ್ | ಸದರಿ<br>ಕೋರ್ಸ್‌ನ ಗರಿಷ್ಠ<br>2 ವರ್ಷ ಅವಧಿಗೆ ಒಳಪಟ್ಟು<br>ವಾರ್ಷಿಕ ರೂ.50,000 |
| 13 | ಎಮ್.ಟೆಕ್/ ಎಮ್ ಇ ( ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್) | ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು<br>ವಾರ್ಷಿಕ ರೂ. 60,000 |
| 14 | ವೈದ್ಯಕೀಯ (ಎಮ್‌ಬಿಬಿಎಸ್ /ಬಿಎಎಮ್‌ಎಸ್ / ಬಿಡಿಎಸ್ /ಬಿಹೆಚ್‌ಎಮ್‌ಎಸ್ ಕೋರ್ಸ್‌ಗೆ ಅಥವಾ ಇದಕ್ಕೆ ಸಂಬಂಧಪಟ್ಟ ಸಮಾನಾಂತರ ಸ್ನಾತಕ್ಕೊತ್ತರ ಕೋರ್ಸ್ | ರೂ.60,000<br>(ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು ) |
| | ಎಮ್‌ಡಿ | ರೂ. 75,000 (ಸದರಿ<br>ಕೋರ್ಸ್‌ನ ಗರಿಷ್ಠ<br>ಅವಧಿಗೆ ಒಳಪಟ್ಟು) |
| 15 | ಪಿಹೆಚ್‌ಡಿ/ ಎಮ್. ಫಿಲ್ (ಯಾವುದೇ ವಿಷಯ) | ಪಿಹೆಚ್‌ಡಿಗೆ ಗರಿಷ್ಠ<br>ಮೂರು ವರ್ಷಗಳಿಗೆ ಹಾಗೂ<br>ಎಮ್‌ಫಿಲ್‌ಗೆ 1 ವರ್ಷಕ್ಕೆ<br>ಪ್ರತಿ ವರ್ಷ<br>ರೂ. 25,000 (ಯೂಜಿಸಿಯ<br>ಜೂನಿಯರ್ ರಿಸರ್ಚ್ ಫೆಲೋಶಿಫ್‌ಗೆ<br>ಆಯ್ಕೆಯಾಗಿರುವ ಅಭ್ಯರ್ಥಿಗಳು ಹಾಗೂ<br>ಮತ್ತು<br>ರಾಜ್ಯ ಸರ್ಕಾರದಲ್ಲಿ ಕೆಲಸ<br>ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಹಾಗೂ<br>ಯೂಜಿಸಿ ನಿಯಮಗಳನ್ವಯ ವೇತನ<br>ಅನುದಾನಕ್ಕೆ ಒಳಪಡುವ ಹುದ್ದೆಗಳಲ್ಲಿ<br>ಅನುದಾನಿತ<br>ಕಾಲೇಜುಗಳಲ್ಲಿ ಕೆಲಸ<br>ನಿರ್ವಹಿಸುತ್ತಿರುವ ಅಭ್ಯರ್ಥಿಗಳು<br>ಈ ಸೌಲಭ್ಯವನ್ನು ಪಡೆಯಲು<br>ಅರ್ಹರಿರುವುದಿಲ್ಲ. |
| 16 | ಐಐಟಿ/ಐಐಐಟಿ/ ಐಐಎಮ್/ ಎನ್‌ಐಟಿ/ ಐಐಎಸ್‌ಇಆರ್/ ಎಐಐಎಮ್‌ಎಸ್ /ಎನ್‌ಎಲ್‌ಯೂ ಮತ್ತು ಭಾರತ ಸರ್ಕಾರದ ಮಾನ್ಯತೆ ಪಡೆದ ಕೋರ್ಸ್‌ಗಳು | ಪಾವತಿಸಿದ ಬೋಧನಾ ಶುಲ್ಕ |

12. **ವೈದ್ಯಕೀಯ ಸಹಾಯಧನ (ಕಾರ್ಮಿಕಆರೋಗ್ಯ ಭಾಗ್ಯ):** ನೋಂದಾಯಿತ ಫಲಾನುಭವಿ ಹಾಗೂ ಅವರಅವಲಂಭಿತರಿಗೆರೂ.300/- ರಿಂದರೂ.10,000/-ವರೆಗೆ

13. **ಅಪಘಾತ ಪರಿಹಾರ:** ಮರಣ ಹೊಂದಿದ್ದಲ್ಲಿರೂ.5,00,000/-, ಸಂಪೂರ್ಣ ಶಾಶ್ವತದುರ್ಬಲತೆಯಾದಲ್ಲಿ ರೂ.2,00,000/- ಮತ್ತುಭಾಗಶಃ ಶಾಶ್ವತದುರ್ಬಲತೆಯಾದಲ್ಲಿ ರೂ.1,00,000/-

14. **ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕಚಿಕಿತ್ಸಾ ಭಾಗ್ಯ):** ಹೃದ್ರೋಗ, ಕಿಡ್ನಿಜೋಡಣೆ, ಕ್ಯಾನ್ಸರ್ ಶಸ್ತ್ರಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯು, ಮೂಳೆ ಶಸ್ತ್ರಚಿಕಿತ್ಸೆ, ಗರ್ಭಕೋಶ ಶಸ್ತ್ರಚಿಕಿತ್ಸೆ, ಅಸ್ತಮ ಚಿಕಿತ್ಸೆ, ಗರ್ಭಪಾತ ಪ್ರಕರಣಗಳು, ಪಿತ್ತಕೋಶದತೊಂದರೆಗೆ ಸಂಬಂಧಿತಚಿಕಿತ್ಸೆ, ಮೂತ್ರ ಪಿಂಡದಲ್ಲಿನಕಲ್ಲುತೆಗೆಯುವಚಿಕಿತ್ಸೆ, ಮೆದುಳಿನ ರಕ್ತಸ್ರಾವದಚಿಕಿತ್ಸೆ, ಅಲ್ಸರ್‌ಚಿಕಿತ್ಸೆ, ಡಯಾಲಿಸಿಸ್ ಚಿಕಿತ್ಸೆ, ಕಿಡ್ನಿ ಶಸ್ತ್ರಚಿಕಿತ್ಸೆ, ಇ.ಎನ್.ಟಿ. ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ನರರೋಗ ಶಸ್ತ್ರಚಿಕಿತ್ಸೆ, ವ್ಯಾಸ್ಕ್ಯೂಲರ್ ಶಸ್ತ್ರಚಿಕಿತ್ಸೆ, ಅನ್ನನಾಳದ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಕರುಳಿನ ಶಸ್ತ್ರಚಿಕಿತ್ಸೆ, ಸ್ತನ ಸಂಬಂಧಿತಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆ, ಹರ್ನಿಯ ಶಸ್ತ್ರಚಿಕಿತ್ಸೆ, ಅಪೆಂಡಿಕ್ಸ್ ಶಸ್ತ್ರಚಿಕಿತ್ಸೆ, ಮೂಳೆ ಮುರಿತ/ಡಿಸ್‌ಲೊಕೇಶನ್‌ಚಿಕಿತ್ಸೆ, ಇತರೆಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000/-ವರೆಗೆ

15. **ಮದುವೆ ಸಹಾಯಧನ (ಗೃಹ ಲಕ್ಷ್ಮೀ ಬಾಂಡ್):** ಫಲಾನುಭವಿ ಅಥವಾಅವರಇಬ್ಬರು ಮಕ್ಕಳ ಮದುವೆಗೆತಲಾ ರೂ.50,000/-

16. **LPG ಸಂಪರ್ಕ ಸೌಲಭ್ಯ (ಕಾರ್ಮಿಕ ಅನಿಲ ಭಾಗ್ಯ):** ಅನಿಲ ಸಂಪರ್ಕದೊಂದಿಗೆಎರಡು ಬರ್ನರ್ ಸ್ಟೌವ್

17. **ಬಿಎಂಟಿಸಿ ಬಸ್ ಪಾಸ್ ಸೌಲಭ್ಯ:** ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆಲಸ ಮಾಡುತ್ತಿರುವಂತಹ / ವಾಸಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುವ ನೋಂದಾಯಿತಕಟ್ಟಡಕಾರ್ಮಿಕರಿಗೆ

18. **ಕೆಎಸ್‌ಆರ್‌ಟಿಸಿ ಬಸ್ ಪಾಸ್‌ನ ಸೌಲಭ್ಯ:** ರಾಜ್ಯದಾದ್ಯಂತ ವಿದ್ಯಾಭ್ಯಾಸದಲ್ಲಿತೊಡಗಿರುವ ನೋಂದಾಯಿತಕಾರ್ಮಿಕರಇಬ್ಬರು ಮಕ್ಕಳಿಗೆ ( ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ)

19. **ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕರೂ.6,000/- ಗಳ ಸಹಾಯಧನ.